ಮಾಧುರಿಯೇ ಮಾಡಿದ್ದಳಲ್ಲ. ಎದ್ದಳು.

ಡ್ರೆಸಿಂಗ್ ರೂಮಿಂದ ಹೊರಬರುವಾಗ ಸ್ಕ್ರೀನು ಕಾಣಿಸಿತು. ಕೆನೆಬಣ್ಣದ ಬ್ರಾ, ಅದೇಬಣ್ಣದ ಪ್ಯಾಂಟಿ. ಗುಳಿಬೀಳುವ ಹೊಕ್ಕಳು. ಕಣ್ಣು ಕೆಳಬಾಗಿತು. 'ತಲೆಯನ್ನು ಕೊಂಚ ಎಡಕ್ಕೆ ಬಾಗಿಸಿ, ಹಾಗೆ' ಎರಡು ಕಣ್ಣುಗಳು ಮೈಯನ್ನೆಲ್ಲಾ ಸವರುತ್ತಿವೆ ಅನಿಸುವ ಭಾವ. 'ಬಲಗೈಯನ್ನು ಚೂರು ಒತ್ತರಿಸಿ' ಗೊತ್ತು, ಆ ಭಾಗ ಹೊರಬರುವಂತಿರುತ್ತದೆ. ಎದ್ದು ಹತ್ತಿರ ಬಂದರು ರಂಗರಾವು. 'ನೋಡಿ, ನಟಿಯರ ಸೌಂದರ್ಯ ಪ್ರೇಕ್ಷಕರ ಆಸ್ತಿ. ಅದನ್ನು ಆಕರ್ಷಕವಾಗಿ ತೋರ್ಸೋದು ಕಲೆ. ಅದು ನಿರ್ದೇಶಕನ ಕೌಶಲ್ಯ. ಪ್ರತಿಫಲ ನಿಮ್ಮದು. ಎಲ್ಲಿ... ಎಡಗಡೇದರ ಅಪ್ಪರ್ಲೈನನ್ನು ಸ್ವಲ್ಪ ಕೆಳ ಜಾರಿಸಿ, ಹೀಗೆ...' ಅನ್ನುತ್ತ ಮುಂದೆ ಬರುವಷ್ಟರಲ್ಲಿ ಅವಳೇ ಕೆಳಸರಿಸಿಕೊಂಡಳು. ವಾಪಸ್ಸು ಹೋದ ರಂಗರಾವು 'ಎಕ್ಸಲೆಂಟ್! ಇದು ತೊಗೋಳಿ, ಹಾಕ್ಕೊಬನ್ನಿ. ಇದು ಲಾಸ್ಟ್, ಯು ಆರ್ ಫೈನಲೈಸಡ್' ಒಂದು ಜೋಡಿ ಗುಲಾಬಿ ಬಣ್ಣದ ವಸ್ತ್ರ ಕೊಟ್ಟರು. ಡ್ರೆಸಿಂಗ್ ರೂಮು ಹೊಕ್ಕವಳು ಬ್ರಾ ತೆಗೆದು ಹಾಕಿ ರಂಗರಾವು ಕೊಟ್ಟ ಗುಲಾಬಿ ಬ್ರಾ ಕೈಯಲ್ಲಿ ಹಿಡಿದಳು. ಕೈ ನಡುಗತೊಡಗಿತು. ಕಪ್ ಎರಡಿಂಚಿನ ಪಟ್ಟಿಯಷ್ಟೇ ಇತ್ತು. ಇಂಗ್ಲಿಷ್ ಸಿನಿಮಾದಲ್ಲಿ ನಟಿಯರು ಹಾಕುವುದನ್ನು ನೋಡಿದ್ದಳು... ಎದೆ ಹೆಚ್ಚೂಕಮ್ಮಿ ತೆರೆದಿಟ್ಟಹಾಗೇ. ಸಂದಿಗ್ಧದಲ್ಲಿ ಒದ್ದಾಡುತ್ತಿರುವಾಗ ಇದ್ದಕ್ಕಿದ್ದಂತೆ ಹೊರಗೆ ಹಾಲಿನಲ್ಲಿ ಕೂಗಾಟ, ಬೈಗುಳ, ಗದ್ದಲ ಸುರುವಾಯ್ತು. ಧಾಪ್ ಧುಪ್ ಯಾರಿಗೋ ಗುದ್ದುವ ಹೊಡೆಯುವ ಸದ್ದು. ಠಳ್ ಠಪ್ ಏನೇನೊ ಒಡೆಯಿತು. ಬಾಗಿಲನ್ನು ಸ್ವಲ್ಪವೇ ತೆರೆದು ಸಣ್ಣ ಸೀಳಿನಲ್ಲಿ ನೋಡಿದಳು. ಒಂದು ಗುಂಪು ಹೆಂಗಸರು ಗಂಡಸರು ರಂಗರಾವ್ ಅನ್ನು ಎಳೆದಾಡಿ ಯರ್‍ರಾಬಿರ್‍ರಿ ಬಡಿದು ಉಗಿಯುತ್ತಿದ್ದರು. ಪೊರಕೆ, ಚಪ್ಪಲಿ ಕೈಗೆ ಸಿಕ್ಕಿದ್ದರಲ್ಲಿ ಚಚ್ಚುತ್ತಿದ್ದರು. ಕ್ಯಾಮರಾ, ಸ್ಕ್ರೀನು, ಕಂಪ್ಯೂಟರು ಒಡೆದು ಚೆಲ್ಲಾಪಿಲ್ಲಿ ಹರಡಿತ್ತು. 'ಲೋಫರ್... ನಿರ್ದೇಶಕನ ನೀನು? ಹೇಳು ಯಾವ ಸಿನಿಮಾ ಮಾಡಿದೀಯ? ಸಿನಿಮಾದಲ್ಲಿ ಛಾನ್ಸು ಕೊಡತೀನಿ ಅಂತಾ ಹೆಣ್ಮಕ್ಕಳನ್ನ ಆಸೆ ಹುಟ್ಸೋದು, ಇಲ್ಲಿ ಹೊಲಸು ಫೋಟೊ ತೆಗೆದು ಬ್ಲಾಕ್‌ಮೇಲು ಮಾಡೋದು... ತಾಯಿಗ್ಗಂಡನ್ನ ತಂದು...' ಒದರಾಟ, ಎಳೆದಾಟ, ಬಡಿತ. ಪೊಲೀಸರು ಬಂದರು. ರಂಗರಾವ್ ಅನ್ನು ಬಿಡಿಸಿಕೊಂಡು ಸ್ಟೇಶನ್ನಿಗೆ ಕರೆದೊಯ್ದರು. ಅವರ ಹಿಂದೆ ಗುಂಪೂ ಹೋಯಿತು. ಸುರಭಿ ಮರವಟ್ಟು ನಿಂತಿದ್ದಳು. ಎರಡು ನಿಮಿಷದ ನಂತರ ತಾನು ಬೆತ್ತಲೆ ನಿಂತಿರುವ ಅರಿವಾಗಿ ಬೇಗಬೇಗ ಬಟ್ಟೆ ಹಾಕಿಕೊಂಡಳು. ಹಾಲೀಗ ನಿರ್ಜನವಾಗಿ ಶಾಂತವಾಗಿತ್ತು. ಜಗತ್ತನ್ನೆ ಧಿಕ್ಕರಿಸುವಂತೆ ಅಲ್ಲಿಂದ ಹೊರಬಿದ್ದು ಎಡಗಡೆ ಗೇಟಿನತ್ತ ನಡೆಯುವಾಗ ಆಕಡೆ ಬಾಗಿಲಿಂದ ಒಬ್ಬ ಹೆಂಗಸು ಎದುರು ಬಂದು ದುರುಗುಟ್ಟಿ, ಹಲ್ಲುಕಡಿಯುತ್ತ ಸುರುಮಾಡಿದಳು: 'ಓ!... ನೀನೂ ಹೀರೋಯಿನ್ನಾಗೋಕೆ ಬಂದೋಳಾ? ನಿನ್ನಂತಾ ಲಜ್ಜೆಗೆಟ್ಟ ಚಿನಾಲೀರು ಹೀಗೆ ದುಂಡಗಾಗಿ ಸಾಲುಗಟ್ಟೋದಕ್ಕೇ ಮತ್ತೆ ಈ ನಾಯಿ ಗೆರೆ ಗಂಡಸ್ರು ಸಲೀಸಾಗಿ ಜೊಲ್ಲುಸುರ್ಸಿ ನೆಕ್ಕತಾ ನಿಲ್ಲೋದು. ಮನೆ ಹಾಳಮಾಡತೀರಲ್ರೇ... ನನ್ನ ಸಂಸಾರ ಬೀದೀಗೆ ತಂದ್ರಲ್ರೇ...' ಓಹೋ ಇವಳು ಅವನ ಹೆಂಡತಿ! ಸುರಭಿಯ ಹತಾಶೆ, ಆತ್ಮಗೌರವಕ್ಕಿಟ್ಟ ಬೆಂಕಿ ಆಕ್ರೋಶವಾಗಿ ಕುದಿಯುತ್ತಿತ್ತು. ಈಗ ಸ್ಫೋಟಿಸಿತು. 'ಏಯ್... ನಿಮ್ಮ ಗಂಡಗೆ ದುಡ್ಡೆಲ್ಲಿಂದ ಬರುತ್ತೆ ಅಂತ ನಿಮಗ್ಗೊತ್ತಿರಲಿಲ್ವ? ಖರ್ಚು ಮಾಡಕೊಂಡು ಸುಮ್ಮನಿದ್ರಾ? ನೀವು ಗರತೀನ? ನಾನು ಇದೆಲ್ಲಾ ಮಾಡಿ ಅಂತ ಬೇಡಿಕೊಂಡು ಬಂದ್ನಾ? ನಿನ್ನ ಗಂಡ ವಂಚನೆ ಮಾಡಿ ಕರೆಸಿಕೊಂಡ. ಸಿನಿಮಾದಲ್ಲಿ ನಟಿಸೋದು ಅಪರಾಧಾನ?' ಆಕ್ರೋಶ ಕರಗುತ್ತಾ ಅಳುವಾಗಿ ಬಿಕ್ಕತೊಡಗಿದಳು. ರಂಗರಾವು ಹೆಂಡತಿಯ ಆವೇಶ ಜರ್‍ರನೆ ಇಳಿದುಹೋಯ್ತು. ಅತ್ತ ಯಾವ ಮಾತಿಗೂ ಜಗ್ಗದ ಗಂಡ; ಇತ್ತ